ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರ ನ್ಯಾಯಾಲಯ,

ಗೋಕಾಕ

ಸಿ.ಸಿ ನಂಃ 1148-2011

ಸಿ.ಡಬ್ಲೂ ಃ 4    ಪಿ.ಡಬ್ಲೂ ಃ 2

ಸಾಕ್ಷಿದಾರರ ಹೆಸರು ಃ- ಬಾಳಪ್ಪಾ ಸಿದ್ದಲಿಂಗಪ್ಪಾ ಭುಜನ್ನವರ
ವಯಸ್ಸು ಃ- 27 ವರ್ಷ
ಉದ್ಯೋಗ ಃ- ಒಕ್ಕಲುತನ
ಸಾಕೀನ ಃ- ಮಸಗುಪ್ಪಿ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆ ಮೇರೆಗೆ ದಿಃ 19-11-2014 ರಂದು ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸ.ಸ.ಅ. ರವರಿಂದಾ

ನನಗೆ ಚಾಸಾ 1 ಗೊತ್ತು ಆರೋಪಿ ನನಗೆ ಗೊತ್ತಿಲ್ಲ. ಈಗ ಸುಮಾರು ಎರಡುವರೆ ವರ್ಷಗಳ ಹಿಂದೆ 25 ಜನ ಸೇರಿ ಯೋಗಿಕೊಳ್ಳ ಮಲ್ಲಯ್ಯನಿಗೆ ಶಿವಾನಂದ ಗೋಟಡಕಿ ಇವರ ಮಗನ ಜಡಿ ತೆಗೆಸುವ ಕಾರ್ಯಕ್ರಮಕ್ಕೆ ಮಾಕ್ಸ್ ಕ್ಯಾಬ ನಂ ಕೆಎ 49 -357 ದಲ್ಲಿ ಹೊರಟಿದ್ದೆವು. ಮಸಗುಪ್ಪಿಯಿಂದ ಬಳೋಬಾಳ ಕ್ರಾಸವರೆಗೂ ಹೋಗಿದ್ದೆವು. ಆಮೇಲೆ ಸಪ್ಪಳ ಬಂದು ನಂತರ ಗಾಡಿ ಪಲ್ಟಿ ಆಗಿ ಕೆಳಗೆ ಬಿದ್ದಿತು. ಆಮೇಲೆ ನನಗೆ ಪ್ರಜ್ಞೆ ತಪ್ಪಿತ್ತು. ನಂತರ ಏನಾಯಿತ ಎಂಬುದು ನನಗೆ ಗೊತ್ತಿಲ್ಲ. ನಂತರ ನಾನು ಉಮರಾಣಿ ಆಸ್ಪತ್ರೆಗೆ ದಾಖಲಾಗಿದ್ದೆನು. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಈ ಬಗ್ಗೆ ನಾನು ಪೋಲಿಸರಿಗೆ ಯಾವುದೇ ಮರು ಹೇಳಿಕೆಯನ್ನು ಕೊಟ್ಟಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಸ.ಸ.ಅ.ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)

ಪಾಟೀ ಸವಾಲು ಃ ಸ.ಸ.ಅ. ರವರಿಂದ ಃ

ಸಾಕ್ಷಿಯು ತನ್ನ ಹೇಳಿಕೆಯಲ್ಲಿ ಅ.ನಂ. 1 ರಿಂದ 19 ರವರೆಗೆ ಬರೆಸಿದ ಹೆಸರುಗಳ ವ್ಯಕ್ತಿಗಳು ವಾಹನದಲ್ಲಿ ಎಂದು ಬರೆಸಿದ್ದೇನೆ ಎಂದರೇ ಸರಿ ಇನ್ನು 20 ರಂದ 22 ಜನ ಇದ್ದರು ಎಂದು ಬರೆಸಿದ್ದೇನೆ ಎಂದರೇ ಸರಿಯಲ್ಲ, ಆರೋಪಿತ ಬಳೋಬಾಳ ಹದ್ದಿಯಲ್ಲಿ ಬಂದೊಡನೆ ವಾಹನವನ್ನು ಜೋರಿನಿಂದ ಮತುತ ನಿರ್ಲಕ್ಷ್ಯತನದಿಂದ ರಸ್ತೆಯ ತಗ್ಗು ದಿನ್ನಿ ಕಡೆಗೆ ನೋಡದೇ ನಡೆಸುತ್ತಿದ್ದ ಆಗ ನಾನು ರಸ್ತೆಯ ಕಡೆ ಗಮನ ಕೊಟ್ಟು ಗಾಡಿಯನ್ನು ನಿಧಾನವಾಗಿ ಓಡಿಸು ಎಂದು ಹೇಳಿದೆ ಆಗ ಚಾಲಕ ಅದನ್ನು ನಿರ್ಲಕ್ಷಿಸಿ ಜೋರಿನಿಂದ ಮತ್ತು ನಿರ್ಲಕ್ಷ್ಯತನದಿಂದ ರಸ್ತೆಯ ಬದಿಯಲ್ಲಿದ್ದ ತಗ್ಗಿಗೆ ವಾಹನವನ್ನು ಹಾಕಿ ಅಪಘಾತ ಮಾಡಿದ ಇದರಿಂದ ವಾಹನ ಪಲ್ಟಿ ಆಗಿ ನಮ್ಮೆಲ್ಲರಿಗೂ ಗಾಯಗಳಾದವು ಎಂದು ಬರೆಸಿದ್ದೇನೆ ಎಂದರೇ ಸರಿಯಲ್ಲ, ಸದರೀ ಅಪಘಾತದ ನಂತರ ಚಾಸಾ 37 ರಿಂದ 39 ಬಂದು ಉಪಚರಿಸಿದರು ಎಂದರೇ ಸರಿಯಲ್ಲ ಹಾಗೂ ಶಿವಾನಂದ ಶಂಕರೆಪ್ಪಾ ಗೋಟಡಕಿ ಇವರಿಗೆ ಮುಖಕ್ಕೆ ಎದೆಗೆ ಬೆನ್ನಿಗೆ ಬಲಗಡೆ ಕಿವಿಗೆ ಬಲಗೈಗೆ ಭಾರೀ ಗಾಯಗಳಾಗಿ ಮೂಗಿನಿಂದ ರಕ್ತ ಬಂದು ಸ್ಥಳದಲ್ಲಿಯೇ ಮೃತಪಟ್ಟಿದ್ದ ಎಂದು ಬರೆಸಿದ್ದೇನೆಂದರೇ ಸರಿಯಲ್ಲ, ನಂತರ ಈ ಬಗ್ಗೆ ಚಾಸಾ 1 ಫಿರ್ಯಾದನ್ನು ಕೊಟ್ಟ ಸಂಗತಿ ನನಗೆ ಗೊತ್ತಾಯಿತು ಎಂದು ಬರೆಸಿದ್ದೇನೆ ಎಂದರೇ ಸರಿಯಲ್ಲ, ಅಪಘಾತ ಮಾಡಿ ಚಾಲಕ ಗಾಡಿ ಬಿಟ್ಟು ಓಡಿ ಹೋಗಿರುತ್ತಾನೆ ಎಂದು ಬರೆಸಿದ್ದೇನೆಂದರೇ ಸರಿಯಲ್ಲ, ದಿಃ 27-03-2011 ರಂದು ನಾನು ಪೋಲಿಸರಿಗೆ ಮರು ಹೇಳಿಕೆಯನ್ನು ನೀಡಿರುತ್ತೇನೆ ಎಂದರೇ ಸರಿಯಲ್ಲ ಇದನ್ನು ನಿಪಿ 2 ಎಂದು ಗುರುತಿಸಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಈ ಓ ಹೆ ಕೇ ಸರಿ ಇದೆ

ಹೆಚ್ಚುವರಿ. ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.ಗೋಕಾಕ